ಎನ್.ಎಸ್. ಶ್ರೀಧರ ಮೂರ್ತಿ

# ಶಬ್ದ ಸಾಗರದಲ್ಲಿ ಸಿಕ್ಕ ಒಂದು ಬೊಗಸೆ ನೀರು

'ದೀಪವನ್ನು ನೋಡ ಬೇಡ... ಬೆಳಕನ್ನು ನೋಡು.'

ಒಂದು ಸಂಜೆ ತಮ್ಮ ಮನೆಯ ದೀಪ ಹಚ್ಚುವ ಹೊತ್ತಿನಲ್ಲಿ ಪ್ರೊ. ಜಿ. ವೆಂಕಟಸುಬ್ಬಯ್ಯ ನನಗೆ ಹೇಳಿದರು. ತುಸು ಹಿಂದೆ ಕೊಂಚ ಗಂಭೀರ ಚರ್ಚೆ ನಡೆದಿತ್ತು. ಜಿ.ವಿಯವರ ವಿಷಯದಲ್ಲಿ 'ಬಿಸಿ ಬಿಸಿ' ಎಂಬ ಶಬ್ದ ಬಳಸುವಂತೆಯೇ ಇಲ್ಲ. ಏಕೆಂದರೆ, ಅವರದು ಯಾವಾಗಲೂ ಮೆಲುದನಿ... ವಿಷಯವನ್ನು ಒಪ್ಪದಿದ್ದರೂ ಅದನ್ನು ಒಳ್ಳೆಯ ಮಾತುಗಳಲ್ಲಿಯೇ ಇನ್ನೊಬ್ಬರ ಮನಸ್ಸಿಗೆ ನೋವಾಗದಂತೆ ಹೇಳುವ ಕಲೆ ಅವರಿಗೆ ಕರಗತ. ಆವತ್ತು ಆಗಿದ್ದು ಅದೇ. ನಾನು ಬರಹಗಾರರೊಬ್ಬರ ಕುರಿತು ಅತಿಶಯದ ಮಾತುಗಳನ್ನು ಆಡಿದ್ದೆ. ಅವರಿಗೆ ಅದು ಇಷ್ಟವಾಗಿರಲಿಲ್ಲ. ಅದನ್ನು ಸೂಕ್ಷ್ಮವಾಗಿ ಹೇಳುತ್ತಲೇ ಥಟ್ಟನೆ ಈ ರೂಪಕ ಬಳಸಿ ಬಿಟ್ಟರು. ಒಂದು ನಿಮಿಷ ಬಿಟ್ಟು, 'ದೀಪವನ್ನು ನೋಡಿದರೆ ಪ್ರತ್ಯೇಕತೆ ಕಾಣುತ್ತದೆ. ಆದರೆ, ಬೆಳಕನ್ನು ನೋಡಿದರೆ ಏಕತೆ ಕಾಣುತ್ತದೆ... ಈಗ ಏನಾಗುತ್ತಿದೆ ಎಂದರೆ ದೊಡ್ಡ ಲೇಖಕ ಎನ್ನುವವನ ಹಿಂದೆ ಎಲ್ಲರೂ ಮೆರವಣಿಗೆಯ ರೀತಿಯಲ್ಲಿ ಹೋಗುತ್ತಾರೆ. ಇದರಿಂದ ಲೇಖಕನಿಗೂ ಸಮಸ್ಯೆ. ಮೆರವಣಿಗೆ ಹೋದವರಿಗೆ ಕೂಡ. ಏಕೆಂದರೆ, ಸಾಹಿತ್ಯ ಎಂದಿಗೂ ಆರಾಧನೆಯಿಂದ ಬೆಳೆಯುವುದಿಲ್ಲ, ಅಧ್ಯಯನದಿಂದ ಬೆಳೆಯುತ್ತದೆ.' ಅಲ್ಲಿಗೆ ನನಗೆ ಅವರು ಹೇಳಬೇಕಿದ್ದ ಮಾತು ಖಚಿತವಾಗಿ ಬಂದಿತ್ತು. ನನಗೆ ಅವರ ಮನದಿಂಗಿತ ಸ್ಪಷ್ಟವಾಯಿತು. ಜಿ.ವಿ ಮತ್ತೆ ವಿಸ್ತರಿಸಿದರು. 'ಅಧ್ಯಯನ' ಎಂದರೆ ತಪಸ್ಸಿನ ಹಾಗೆ; ಪ್ರಚಾರಕ್ಕೆ ದೂರವಾಗಿ ವಿಷಯಕ್ಕೆ ಬದ್ಧವಾಗಿ ದಿನಗಟ್ಟಲೆ, ತಿಂಗಳುಗಳಗಟ್ಟಲೆ, ವರ್ಷಗಟ್ಟಲೆ ಸಾಧನೆ ಮಾಡಬೇಕು. ಆಗ ಮಾತ್ರ ಹಿಡಿದ ಧ್ಯೇಯಕ್ಕೆ ನ್ಯಾಯ ಒದಗಿಸಲು ಸಾಧ್ಯ.'

ನನಗೆ ಜಿ. ವೆಂಕಟಸುಬ್ಬಯ್ಯನವರ ದರ್ಶನಲಾಭ ಏನಿಲ್ಲ ಎಂದರೂ ಮೂರು ದಶಕಗಳಿಂದ ನಿರಂತರವಾಗಿ ಲಭಿಸಿದೆ. ಆಗೆಲ್ಲಾ ಅವರು ಉಪನಿಷತ್ ಮಾದರಿಯ ಇಂತಹ ಚಿಕ್ಕ ವಾಕ್ಯಗಳಿಂದಲೇ ಜೀವನದರ್ಶನವನ್ನು ನೀಡುತ್ತಾ ಹೋದರು. ಅವರ ಸಂಪರ್ಕಕ್ಕೆ ಬಂದ ಎಲ್ಲರ ಅನುಭವವೂ ಇದೇ ಆಗಿರುತ್ತದೆ. ಕಿರಿಯರನ್ನು ಅವರು ಎಂದಿಗೂ ಸಮಕಾಲೀನರಂತೆಯೇ ನೋಡುತ್ತಾ ಬಂದರು. ನನ್ನ ಎರಡರಷ್ಟು ವಯಸ್ಸಾಗಿದ್ದ ಅವರು ಎಂದಿಗೂ ದೂರವಿಟ್ಟು ಗೌರವಿಸಬೇಕಾದ ಹಿರಿಯರು ಅನ್ನಿಸದಂತೆ ನಡೆಸಿಕೊಂಡರು. ನನ್ನ ಸಮಕಾಲೀನರಿಗಿಂತಲೂ ಹೆಚ್ಚು ಮನಸ್ಸನ್ನು ಬಿಚ್ಚಿ ಅವರ ಜೊತೆ